**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 7**

**ಸಿ.ಡಬ್ಲ್ಯುಃ 10**

| | |
|---|---|
| ಸಾಕ್ಷಿದಾರರ ಹೆಸರು | ಸುಗುಣ |
| ತಂದೆಯ ಹೆಸರು | ಗೋಪಾಲ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಪೋಸ್ಟ್‌ಮಾಸ್ಟರ್ |
| ವಿಳಾಸ | ಬ್ರಹ್ಮಾವರ |

ದಿನಾಂಕಃ 17-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು 2016 ರಿಂದ 2019 ರವರೆಗೆ ಮಣಿಪಾಲದ ಹೆಡ್ ಪೋಸ್ಟ್ ಆಫೀಸಿನಲ್ಲಿ ಪೋಸ್ಟ ಮಾಸ್ಟರ್ ಎಂದು ಸೇವೆ ಸಲ್ಲಿಸಿದ್ದೇನೆ.

2) ಉಡುಪಿಯ ಎಸಿಬಿ ಪೊಲೀಸರು ನನ್ನ ಕಚೇರಿಗೆ ದಿನಾಂಕ 08-05-2019 ರ ಪತ್ರ ಬರೆದು, ಅವರ ತನಿಖೆಯ ಸಮಯದಲ್ಲಿ ಜಪ್ತು ಮಾಡಿದ್ದ ಪತ್ರ ನೊಂದಾಯಿತ ಅಂಚೆಯ ಮೂಲಕ ಬಂದಿದ್ದ ಬಗ್ಗೆ ವಿವರ ಕೋರಿದ್ದರು. ಆ ಕೋರಿಕೆ ಪತ್ರವನ್ನು ಪಡೆದು, ಅದಕ್ಕೆ ನಾನು ದಿನಾಂಕ 15-05-2019 ರಂದು ಸಲ್ಲಿಸಿದ್ದೆ. ಆ ವಿವರಗಳನ್ನು ತನಿಖಾಧಿಕಾರಿಗೆ ಕೋರಿಕೆಯಲ್ಲಿಯೇ ಒದಗಿಸಿ, ಸಂಬಂಧಪಟ್ಟ ದಾಖಲೆಯ ನಕಲನ್ನು ದೃಢೀಕರಿಸಿ ಲಗತ್ತು ಪತ್ರದೊಂದಿಗೆ ಸಲ್ಲಿಸಿದ್ದೆ. ನಾನು ಪಡೆದಿದ್ದ ಕೋರಿಕೆಯನ್ನು ಈಗ ನೋಡಿ ನಿಪಿ-28, ನಾನು ಕೊಟ್ಟ ಮಾಹಿತಿಯನ್ನು ನಿಶಾನೆ ಪಿ-29, ಲಗತ್ತು ಪತ್ರವನ್ನು ನಿಪಿ-30 ಎಂದು ಗುರುತಿಸಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದ**

1) ನಿಶಾನೆ ಪಿ-28 ರೊಂದಿಗೆ ನಾನು ಬಟವಾಡೆ ಮಾಡಿದ ಪತ್ರವನ್ನಾಗಲೀ, ಅದರ ನಕಲನ್ನಾಗಲೀ ನಾನು ಪಡೆದಿಲ್ಲ. ನಿಶಾನೆ ಪಿ-29 ಮತ್ತು 30 ಇವುಗಳು ಗಣಕೀಕರಣದ ಮುದ್ರಣವಾಗಿದೆ. ನಿಪಿ-29 ರ ದಾಖಲೆಯನ್ನು ನಾನು

ಪ್ರಮಾಣೀಕರಿಸಿದ್ದೇನೆ. ನಮ್ಮ ಕಚೇರಿಯಿಂದ ನೊಂದಿತ ಅಂಚೆ ನಿಪಿ-29ರಲ್ಲಿ ಹೇಳಿದಂತೆ ಬಟವಾಡೆ ಮಾಡಿಲ್ಲ ಎಂದರೆ ಸರಿಯಲ್ಲ. ನೊಂದಿತ ಅಂಚೆಗಳನ್ನು ಬಟವಾಡೆ ಮಾಡುವ ಶಾಖೆ ಬೇರೆ ಇದೆ. ನಿಶಾನೆ ಪಿ-29 ಮತ್ತು 30ರ ದಾಖಲೆಗಳನ್ನು ತನಿಖಾಧಿಕಾರಿಗೆ ಸಹಾಯವಾಗಲೀ ಎಂದು ನಾನು ಕೊಟ್ಟ ದಾಖಲೆಗಳು ಎಂದರೆ ಸರಿಯಲ್ಲ. ಆ ದಾಖಲೆಗೆ ಮತ್ತು ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ-**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ